ಈ ಇಂಡಸ್ಟ್ರಿಗಳಿನ್ನೂ ನಮ್ಮಲ್ಲಿ ಜಾಸ್ತಿ ಆಗಬೇಕು. ಆದರೆ ಈಗ ಇರತಕ್ಕ ಇಂಡಸ್ಟ್ರಿಗಳೇನಿವೆ ಇವುಗಳ ವಿಚಾರದಲ್ಲಿ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ನಮ್ಮ ಪ್ಲಾನುಗಳೆಲ್ಲ ಯಶಸ್ವಿಯಾಗಿ ಮುಂದೆ ಸಾಗಬೇಕಾಗಿದ್ದರೆ ಅವುಗಳನ್ನು ನಾವು ಒಂದು ತತ್ವದ ಆಧಾರದ ಮೇಲೆ ರೂಪಿಸಬಹುದಾಗಿದೆ. ಆ ತತ್ವದಲ್ಲಿ ಎರಡು ಭಾಗಗಳಿವೆ. ನಾವೇನು ಈಗ ಒಂದು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದೇವೋ ಅದಕ್ಕನುಗುಣವಾಗಿ ನಮ್ಮ ತತ್ವಗಳನ್ನೆಲ್ಲಾ ಮೊದಲು ಒಂದು ಸಾಮೂಹಿಕ ವ್ಯವಸ್ಥೆಯ ಮೇಲೆ ರೂಪಿಸಿಕೊಳ್ಳಬೇಕಾದದು ಮೊದಲನೆಯ ಭಾಗ. ಇನ್ನು ಎರಡನೆಯದು ಆ ಸಾಮೂಹಿಕ ವ್ಯವಸ್ಥೆಗೆ ಅನುಸಾರವಾಗಿ ಕಾರ್ಯಗಳನ್ನು ಮುಂದುವರಿಸುವುದು. ಈ ರೀತಿಯಾಗಿ ಯಾವುದಾದರೊಂದು ತತ್ವವನ್ನು ಅನುಸರಿಸದೆ ಯಾವ ಸಮಾಜವೇ ಆಗಲಿ ಸಾಮೂಹಿಕ ಸಂಘಟನೆಯಿಲ್ಲದೆ ಅದು ಮುಂದಕ್ಕೆ ಬರಲಾರದು. ಯಾವ ದೇಶದಲ್ಲಿ ಈ ಕೈಗಾರಿಕೆಗಳು ಅಭಿವೃದ್ಧಿಗೆ ಬರುವುದಿಲ್ಲವೋ ಆ ದೇಶ ಎಂದೂ ಮುಂದಕ್ಕೆ ಬರಲಾರದು. ದೇಶದಲ್ಲಿ ಕೈಗಾರಿಕೆಗಳು ಮುಂದುವರಿಯದಿದ್ದರೆ ನಮ್ಮ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ನಾವು ಬೆಳಸಲು ಸಾಧ್ಯವಿಲ್ಲ. ಈ ಸಾಮೂಹಿಕ ಸಂಘಟನೆ ಇಲ್ಲದಿರುವುದರಿಂದ ಈ ದಿವಸ ನಮ್ಮ ಸ್ಟೇಟ್ ನಡೆಸುತ್ತಿರುವ ಇಂಡಸ್ಟ್ರಿಗಳೊಂದೂ ಚೆನ್ನಾಗಿ ನಡೆಯುತ್ತಿಲ್ಲ. ಭಾರಿ ಬಂಡವಾಳ ಬೇಳತಕ್ಕ ಕೈಗಾರಿಕೆಗಳು ಯಾವು ಇವೆಯೋ ಅಂಥವುಗಳನ್ನು ಮಾತ್ರ ಸರ್ಕಾರ ಇಟ್ಟುಕೊಂಡು ಇನ್ನುಳಿದುವುಗಳನ್ನು ಪ್ರೈವೇಟ್ ಸೆಕ್ಟಾರಿಗೆ ಬಿಟ್ಟುಕೊಡಬೇಕು. ಈ ಕೈಗಾರಿಕೆಗಳ ಅಭಿವೃದ್ಧಿಗೆ ಹಣವನ್ನೊದಗಿಸುವಾಗ ಅದರಲ್ಲಿ ಇಂಬ್ಯಾಲೆನ್ಸ್ ಇರಬಾರದು. ಆಯಾಯ ಇಲಾಖೆಯ ಮಹತ್ವ ನೋಡಿಕೊಂಡು ಅವುಗಳಿಗೆ ಮೊತ್ತವನ್ನೊದಗಿಸಬೇಕು. ಒಂದು ಇಲಾಖೆಯ ಕೈಗಾರಿಕೆಗೂ-ಇನ್ನೊಂದು ಇಲಾಖೆಯ ಕೈಗಾರಿಕೆಗೂ ಹೆಚ್ಚಿನ ಅಂತರವನ್ನು ಹಣದ ಮಟ್ಟದಲ್ಲಿ ತೋರಿಸಬಾರದು. ಒಂದು ಇಲಾಖೆ ಕೈಗಾರಿಕೆಗೆ 8 ಲಕ್ಷ ಮತ್ತೊಂದಕ್ಕೆ 103 ಲಕ್ಷ ಮಗದೊಂದಕ್ಕೆ 70 ಲಕ್ಷ ಹೀಗೆಲ್ಲಾ ಮಾಡಬಾರದು. ಈಗ ಸರ್ಕಾರದವರು ವ್ಯವಸಾಯದ ಇಲಾಖೆಯ ಮೂಲಕ ನಡಸತಕ್ಕ ಕೈಗಾರಿಕೆಗಳಿಂದ ಸ್ವಲ್ಪ ಹಣವನ್ನು ಕಿತ್ತುಕೊಳ್ಳಬಹುದು. ಅದೇ ರೀತಿ ಈ ರೂರಲ್ ಇಂಡಸ್ಟ್ರೀಸ್ ಬಾಬಿನಿಂದಲೂ ಸ್ವಲ್ಪ ಹಣವನ್ನು ಕಿತ್ತುಕೊಳ್ಳಬಹುದು. ನೇರವಾಗಿ ಕೈಗಾರಿಕೆಗಳನ್ನು ನಡೆಸತಕ್ಕ ಬಾಬಿಗೆ ಹೆಚ್ಚು ಹಣವನ್ನೊದಗಿಸಬೇಕು. ಈ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾಗಿದ್ದರೆ ಇದು ಒಬ್ಬೊಬ್ಬರ ಕೈಯಿಂದ ಆಗುವ ಕೆಲಸವಲ್ಲ—ಆದರೆ ಒಬ್ಬ ಮಂತ್ರಿಗಳಿಂದಲೇ ಆಗತಕ್ಕ ಬದುಕಲ್ಲ. ಎಲ್ಲರೂ ಒಟ್ಟಾಗಿ ಸೇರಿ ಮಾಡಬೇಕು, ಎಲ್ಲ ಮಂತ್ರಿಗಳು ಒಂದು ಟೀಂ ಸ್ಪಿರಿಟ ನಿಂದ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ಆದಷ್ಟೂ ಈ ಇಂಡಸ್ಟ್ರೀಸ್‌ಗಳನ್ನು ಪ್ರೈವೇಟ್ ಸೆಕ್ಟಾರಿಗೆ ಬಿಟ್ಟುಕೊಡದೆ ಇಲಾಖೆಯ ಮೂಲಕ ನಡೆಸತಕ್ಕದ್ದನ್ನು ಜಾಸ್ತಿ ಮಾಡಿದರೆ ದೇಶದಲ್ಲಿ ಬೇಗ ಎಕಾನಮಿಕ್ ಅಡ್ವಾನ್ಸ್‌ಮೆಂಟಿಗೆ ದಾರಿಯಾಗುತ್ತದೆ. ಇದಕ್ಕೆ ಈಗ ನಾನು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಅದೇನೆಂದರೆ ಈಗ ಹಳ್ಳಿಗಳ ಕಡೆ ಇಲಾಖೆಯವರು ಕಂಟ್ರಾಕ್ಟ್ ಮೂಲಕ ರಸ್ತೆಗಳನ್ನು ಮಾಡಿಸುತ್ತಿದ್ದಾರೆ. ಅವುಗಳನ್ನು ಪೀಸ್‌ವರ್ಕ್ ಸಿಸ್ಟಂ ಮೇಲೆ ನಡೆಸಲಾಗುತ್ತಿದೆ. ಅಲ್ಲಿಯ ಕಂಟ್ರಾಕ್ಟರು ನನ್ನಹತ್ತಿರ ಬಂದು "ಅಣ್ಣಾ, ಅವರು ಹೇಗೆ ಮಾಡಲಿ ನನಗೇನೋ ಶೇಕಡ 50 ಗಿಟ್ಟೇಗಿಟ್ಟುತ್ತದೆ" ಎಂದು ಹೇಳುತ್ತಿದ್ದಾರೆ. ಇಲಾಖೆಯ ಮೂಲಕವೇ ಆ ಕೆಲಸ ನಡೆಸಿದ್ದರೆ ಶೇಕಡ 50 ರಷ್ಟು ದುಡ್ಡು ಸರ್ಕಾರಕ್ಕೆ ಉಳಿಯುತ್ತಿತ್ತು. ಆದರೆ ಈ ದಿವಸ ಎಲ್ಲಾ ಕೈಗಾರಿಕೆಗಳನ್ನು ಪ್ರೈವೇಟ್ ಸೆಕ್ಟಾರಿಗೊಪ್ಪಿಸಿ ಸರ್ಕಾರ ಕೇವಲ ಒಂದಾಣೆ ಭಾಗವನ್ನು ಮಾತ್ರ ನಡೆಸುತ್ತಿದೆ. ಇದು ಸರಿಯಾದ ಮಾರ್ಗವಲ್ಲ. ಇದರಿಂದ 5 ವರ್ಷಗಳಲ್ಲಾಗತಕ್ಕ ಬದುಕು 50 ವರ್ಷಗಳಾದರೂ ಆಗುವುದಿಲ್ಲ. ಈ ಹಿಂದೆ ಯೂನಿವರ್ಸಿಟಿಗೆ ಹುಡುಗರೇ ಹೆಚ್ಚಿಗೆ ಬರುತ್ತಿರಲಿಲ್ಲ. ಆಗ ಅವರಿಗೆ ಒಂದು ಪ್ರೋತ್ಸಾಹ ನೀಡಲು ಸ್ಕಾಲರ್‌ಷಿಪ್ ಇತ್ಯಾದಿಗಳನ್ನೆಲ್ಲ ಕೊಟ್ಟು ಹುಡುಗರನ್ನು ಬಲವಂತದಿಂದ ಕಾಲೇಜಿಗೆ ಸೇರಿಸಿಕೊಳ್ಳಬೇಕಾಗಿತ್ತು. ಆದರೆ ಈ ದಿವಸದ ಪರಿಸ್ಥಿತಿ ಹಾಗಿಲ್ಲ.

ಕೊನೆಯದಾಗಿ ನಾನು ಒಂದು ಮಾತನ್ನು ಹೇಳುತ್ತೇನೆ—ಇತ್ತೀಚಿಗೆ ನಮ್ಮ ದೇಶದಲ್ಲಿ ಎಷ್ಟೆಷ್ಟೋ ಕ್ರಾಂತಿಗಳಾಗಬೇಕಾಗಿದ್ದವು. ಆದರೆ ಕೇಂದ್ರ ಸರ್ಕಾರದವರು ಈಗಾಗಲೇ ಈ ಕೈಗಾರಿಕೆಗಳ ಬಗ್ಗೆ ಎಚ್ಚೆತ್ತುಕೊಂಡು ತಪ್ಪು ಲೋಪದೋಷಗಳನ್ನು ಸರಿಪಡಿಸಿಕೊಂಡು ಎಕನಾಮಿಕ್ ಕಂಡೀಷನ್ನನ್ನು ಅಲ್ಲಲ್ಲಿಗೆ ಸರಿದಿಪಸಿಕೊಂಡು ಹೋಗುತ್ತಿದ್ದಾರೆ. ಆದರೆ ಮೈಸೂರು ಸರ್ಕಾರದವರಿನ್ನೂ ಈ ಭಾಗದಲ್ಲಿ ಎಚ್ಚೆತ್ತಿಲ್ಲ. ಈಗಲಾದರೂ ಇವರು ಈಗ ಅಲೋಕೇಟ್ ಮಾಡಿರತಕ್ಕ ಹಣಸರಿಯಾಗಿಲ್ಲದ್ದರಿಂದ ಇದನ್ನು ಬದಲಾಯಿಸಿ ನಾನಾಗಲೇ ಸೂಚಿಸಿದಂತೆ ರೀಅಲೋಕೇಟ್ ಮಾಡಬೇಕೆಂದು ಹೇಳಿ ನನ್ನಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸ್ವಾಮಿ, ನಮ್ಮ ದೇಶದಲ್ಲಿ ವ್ಯವಸಾಯದ ಬಾಬು ಒಂದನ್ನು ಬಿಟ್ಟರೆ ಇನ್ನು ದೇಶಾಭಿವೃದ್ಧಿಯನ್ನು ಮತ್ತು ದೇಶದ ಕಲ್ಯಾಣವನ್ನು ಸಾಧಿಸತಕ್ಕ ಮಾರ್ಗವೆಂದರೆ ಅದು ಈ ಕೈಗಾರಿಕಯೊಂದೇ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬಹುದೆಂದು ಕಾಣುತ್ತದೆ. ಈ ಅಂಶವನ್ನು ಮೈಸೂರು ದೇಶ ಬಹಳ ಹಿಂದಯೇ ಸ್ಪಷ್ಟಪಡಿಸಿಕೊಂಡಿದೆ. ಈ ಹೊತ್ತು ಇಡೀ ಪ್ರಪಂಚಕ್ಕೇ ಪ್ರಖ್ಯಾತ ಹೊಂದಿದ್ದಂಥ ನಮ್ಮ ರಾಜ್ಯದ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯನವರು ಇಲ್ಲಿ ಕೈಗಾರಿಕಾ ಪ್ರಗತಿಯನ್ನು ಸಾಧನೆ ಮಾಡುವುದಕ್ಕಾಗಿ ಮತ್ತು ಈ ಕೈಗಾರಿಕೆಗಳಿಂದಲೇ ದೇಶಕ್ಕೆ ಮುಕ್ತಿ ದೊರೆಯಬೇಕೆಂಬ ತತ್ವವನ್ನು ಅವರು ಅನುಸರಿಸಿ ಈ ದೇಶದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಲು ಸತತ ಪ್ರಯತ್ನಗಳನ್ನು ಮಾಡಿದ್ದಾರೆ. ಅದರ ಫಲವಾಗಿ ಈ

(ಶ್ರೀ ಟಿ. ಮಾದಯ್ಯಗೌಡ)

ಹಿಂದೆ ಮೈಸೂರು ದೇಶ ಭಾರತದಲ್ಲೇ ಈ ಕೈಗಾರಿಕೆಗಳಲ್ಲಿ ಮುಂದುವರಿದ ದೇಶ, ಮಾದರಿ ದೇಶ ಎಂದು ಅನಿಸಿಕೊಂಡಿತ್ತು. ಆದರೆ ಈ ದಿವಸ ಈ ರಾಜ್ಯ ಕಾರಣವಶಾತ್ ದೇಶ-ದೇಶಗಳ ಪೈಪೋಟಿಯಿಂದ ದುರದೃಷ್ಟವಶಾತ್ ಇಂದು ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದೆ ಎನ್ನತಕ್ಕ ವಿಷಯವನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ದೇಶದಲ್ಲಿ ಈಗ ಕೈಗಾರಿಕೆಗಳು ನಾನಾ ರೂಪಗಳಲ್ಲಿ ಪ್ರಾರಂಭವಾಗಿವೆ. ಅನೇಕ ಕೈಗಾರಿಕೆಗಳು ಹೀಗೆ ಪ್ರಾರಂಭವಾಗಿವೆ. ಕೆಲವನ್ನು ಸರ್ಕಾರದವರೇ ನೇರವಾಗಿ ನಡೆಸುತ್ತಿದ್ದಾರೆ, ಕೆಲವನ್ನು ಖಾಸಗಿಯವರೂ ನಡೆಸುತ್ತಿದ್ದಾರೆ. ಇನ್ನು ಕೆಲವು ಜಾಯಿಂಟ್ ಸ್ಟಾಕ್ ಕಂಪೆನಿಗಳ ಮೂಲಕ ನಡೆಯುತ್ತಿವೆ. ಅಂತೂ ಈದಿವಸ ನಮ್ಮ ರಾಜ್ಯದಲ್ಲಿ ಕೆಲವು ಸಣ್ಣ ಕೈಗಾರಿಕೆಗಳು ಇವೆ, ಮಧ್ಯ ಮತರಗತಿ ಕೈಗಾರಿಕೆಗಳು ಇವೆ. ಹಾಗೂ ಭಾರಿ ಪ್ರಮಾಣದ ಕೈಗಾರಿಕೆಗಳು ಇವೆ. ಈ ಎಲ್ಲಾ ದರ್ಜೆಯ ಕೈಗಾರಿಕೆಗಳ ಪ್ರಗತಿಯನ್ನೂ ನಾವು ಕೂಲಂಕಷವಾಗಿ ವಿಚಾರ ಮಾಡಿ ನೋಡಿದರೆ ಈ ದಿವಸ ಎಷ್ಟರ ಮಟ್ಟಿಗೆ ಈ ಎಲ್ಲಾ ಕೈಗಾರಿಗಳೂ ಯಾವ ಯಾವ ಭಾಗದಲ್ಲಿ ನಡೆಯಬೇಕಾಗಿದ್ದವೋ ಅಷ್ಟರ ಮಟ್ಟಿಗೆ ನಡೆಯುತ್ತಿಲ್ಲವೆಂದು ನನಗೆ ಅನಿಸುತ್ತಿದೆ. ಸರ್ಕಾರ ಈ ದಿವಸ ನೇರವಾಗಿ ನಡೆಸುತ್ತಿರುವ ಕೆಲವು ಕೈಗಾರಿಕೆಗಳಲ್ಲಿ ಕೆಲವು ಲೋಪದೋಷಗಳು ನಮ್ಮ ಮುಂದೆ ಎದ್ದು ಕಾಣುತ್ತಿವೆ. ಆದರೆ ಈ ಕೈಗಾರಿಕೆಗಳನ್ನು ಸುಗಮವಾಗಿ ನಡೆಸುವುದಕ್ಕೆ ಜನರು ಏನು ಒಂದು ವಿಧವಾದ ಅನುಭವಗಳನ್ನು ಪಡೆದಿರಬೇಕೋ, ಈ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗಲು ಏನೊಂದು ಅನುಭವವಿರಬೇಕೋ ಅದು ಇಲ್ಲದೆ ಇರುವುದು ಒಂದು ನ್ಯೂನತೆ. ಈ ಕೈಗಾರಿಕೆಗಳಿಗೆ ಒಂದು ಸರಿಯಾದ ಪ್ರೋತ್ಸಾಹವಿಲ್ಲದಿರುವುದು ಮತ್ತೊಂದು ನ್ಯೂನತೆ. ಇನ್ನು ಮೂರನೆಯದಾಗಿ ಈ ಕಾರ್ಖಾನೆಗಳ ಕೆಲಸಗಳನ್ನು ನಡೆಸಿಕೊಂಡು ಹೋಗತಕ್ಕ ಜನರಲ್ಲಿ ಒಂದು ಸಮರಸಭಾವನೆ ಇರಬೇಕಾಗಿತ್ತು-ಅದಿಲ್ಲದಿರುವುದು ಒಂದು ನ್ಯೂನತೆಯೇ. ಈ ಕಾರಣಗಳಿಂದ ನಮ್ಮ ದೇಶದಲ್ಲಿ ಈ ಕೈಗಾರಿಕೆಗಳು ಎಷ್ಟರ ಮಟ್ಟಿಗೆ ಅಭಿವೃದ್ಧಿಗೆ ಬರಬೇಕಾಗಿದ್ದವೋ ಅಷ್ಟರ ಮಟ್ಟಿಗೆ ಅಭಿವೃದ್ಧಿಗೆ ಬರಲು ಆಗಲಿಲ್ಲ. ಇದಲ್ಲದೆ ಅನೇಕ ಬಾಬುಗಳಲ್ಲಿ ನಷ್ಟವಾಗುತ್ತಾ ಇದೆ. ಸರಿಯಾದ ವರಮಾನ ಏಕೆ ಬರುತ್ತಿಲ್ಲ ಎನ್ನುವುದನ್ನು ವಿಮರ್ಶೆಮಾಡಿ ನೋಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಆದರೆ ಇದುವರೆಗೆ ಅಂಥ ಪ್ರಯತ್ನ ಮಾಡಿಲ್ಲ. ಇನ್ನಾದರೂ ಸರಕಾರ ಈ ರೀತಿ ಪ್ರಯತ್ನ ಮಾಬೇಕೆಂದು ಒತ್ತಾಯಪೂರ್ವಕ ಹೇಳಲು ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಇಂಥಾದ್ದಕ್ಕೆ ಉದಾಹರಣೆ ಕೊಡಬೇಕು.

ಶ್ರೀ ಟಿ. ಮಾದಯ್ಯಗೌಡ.—ಪೋರ್ಸಲೇನ ಫ್ಯಾಕ್ಟರಿಯಿದೆ. ನಿನ್ನೆ ಮೊನ್ನೆಯಿಂದ ಸ್ವಲ್ಪ ಆದಾಯ ಬರುತ್ತಿದೆ.

ಶ್ರೀ ಕೆ. ಮಲ್ಲಪ್ಪ.—ಪೋರ್ಸಲೇನ ಫ್ಯಾಕ್ಟರಿಯಿಂದ ಈ ವರ್ಷ ಹನ್ನೆರಡು ಲಕ್ಷ ರೂಪಾಯಿ ವರಮಾನ ಬಂದಿದೆ. Last year it worked at a loss of Rs. 12 lakhs. This year it has got a profit of Rs. 12 lakhs, excluding depreciation charges and interest on capital investments.

ಶ್ರೀ ಟಿ. ಮಾದಯ್ಯಗೌಡ.—ಅಷ್ಟೇನೂ ಹೆಚ್ಚಿಲ್ಲ. ಇದು ಹೆಮ್ಮೆ ಪಡತಕ್ಕಂಥಾದ್ದಲ್ಲ, ಒಂದು ಸಲಹೆ ಮಾಡಬೇಕೆಂದಿದ್ದೇನೆ. ಈ ಕೈಗಾರಿಕೆಗಳಿಂದ ನಷ್ಟವಾಗುವುದನ್ನು ಮೊದಲು ತಪ್ಪಿಸಬೇಕು. ನಮ್ಮ ಸರಕಾರ ಒಂದು ದೂರ ದೃಷ್ಟಿಯನ್ನು ಇಟ್ಟುಕೊಂಡು ವಿವೇಚನೆಯಿಂದ ಕೆಲಸ ಕಾರ್ಯಗಳನ್ನು ನಡೆಸುವಂತಾದರೆ ಈ ಕೈಗಾರಿಕೆಗಳಿಂದ ಲಾಭ ಬರುವಂತೆ ಮಾಡಿದರೆ ಲಕ್ಷಾಂತರ ಜನರಿಗೆ ಕೆಲಸಸಿಕ್ಕುತ್ತದೆ ಮತ್ತು ಇಂಥ ಕೈಗಾರಿಕೆಗಳಿಗೆ ಇನ್ನೂ ಹೆಚ್ಚು ಪ್ರಮಾಣದಲ್ಲಿ ಹಣವನ್ನು ಒದಗಿಸಲು ಸಾಧ್ಯವಾಗುತ್ತದೆ. ಈಗ ಇರತಕ್ಕ working cost ತೀರ ದುಬಾರಿಯಾಗಿದೆ. ಅಷ್ಟು ಹಣ ಒದಗಿಸಿ ಕಡಮೆ ಲಾಭ ಪಡೆಯುವುದು ಒಳ್ಳೆಯದಲ್ಲ. ನಷ್ಟವಾಗುವದಕ್ಕೆ ಕಾರಣವೇನೆಂದರೆ capacity ಬಹಳ ಕಡಮೆಯಾಗಿದೆ. ಒಂದು ಕಮಿಟಿಯನ್ನು ನೇಮಕಮಾಡಿ ಸಾಧಾರಣವಾಗಿ ಎಲ್ಲ ಫ್ಯಾಕ್ಟರಿಗಳ ಸರ್ವೇ ಮಾಡಿಸಬೇಕು. ಕೆಲವೊಂದು ಕಾರ್ಖಾನೆಗಳಲ್ಲಿ full capacity ಯಿಂದ ಕೆಲಸ ಮಾಡುತ್ತಿರಬಹುದು. ಆದರೆ ಅನೇಕ ಕಡೆ ಇದು ಬಹಳ ಕಡಮೆ ಇದೆ. ಅದು ಶೇಕಡ 60 ರಷ್ಟು ಆಗುತ್ತದೆ.

ಶ್ರೀ ಕೆ. ಮಲ್ಲಪ್ಪ.—ಒಂದು ನಿದರ್ಶನವನ್ನಾದರೂ ಹೇಳಬೇಕು.

ಶ್ರೀ ಟಿ. ಮಾದಯ್ಯಗೌಡ.—ಈ ವಿವರ ಎ. ಜಿ. ರಾಮಚಂದ್ರರಾಯರ ವರದಿಯಲ್ಲಿದೆ. ಶೇಕಡ 60 ರಷ್ಟು ಆಗುತ್ತದೆಂದು ಹೇಳಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಯಾವ ಫ್ಯಾಕ್ಟರಿ ನೋಡಿ ಇದನ್ನು ಹೇಳುತ್ತಿದ್ದೀರಿ?

ಶ್ರೀ ಟಿ. ಮಾದಯ್ಯಗೌಡ.—ನಾನು ನೋಡಿಯೇ ಹೇಳುತ್ತಿದ್ದೇನೆ. ಕಾರಖಾನೆಯಲ್ಲಿ ತಯಾರಾಗುವ ಸಾಮಾನುಗಳನ್ನು ನೇರವಾಗಿ ಮಾರ್ಕೆಟ್ಟಿಗೆ ಸರಿಯಾಗಿ ಒದಗಿಸುತ್ತಿಲ್ಲ. ಏಜೆಂಟರಿಗೆ ಕಮಿಷನ್ ಕೊಡುವುದರಿಂದ ನಷ್ಟವಾಗುವುದಕ್ಕೆ ಕಾರಣವಾಗಿದೆ. ಎಂಪೋರಿಯಮ್ ಪ್ರಾರಂಭಮಾಡಿ ಹೆಚ್ಚು ಸಾಮಾನುಗಳು ಮಾರ್ಕೆಟ್ಟಿಗೆ ಬರುವಹಾಗೆ ಮಾಡಿದರೆ ಹಣ ಸಂಪಾದನೆಯಾಗುತ್ತದೆ. ಈ ರೀತಿ ಒಂದು ವ್ಯವಸ್ಥೆ ಮಾಡುವ ಅವಶ್ಯಕತೆಯಿದೆ.

ಶ್ರೀ ಕೆ. ಮಲ್ಲಪ್ಪ.—ಡಿಲ್ಲಿಯಲ್ಲಿ ದೊಡ್ಡ ಎಂಪೋರಿಯಮ್ ಇದೆ.

ಶ್ರೀ ಟಿ. ಮಾದಯ್ಯಗೌಡ.—ಈಚೆಗೆ ಮಾಡಿದ್ದಾರೋ ಏನೋ ಗೊತ್ತಿಲ್ಲ. ಬೆಂಗಳೂರಿನಲ್ಲಿ ಒಂದು ಎಂಪೋರಿಯಮ್ ಇದೆ. ಮೈಸೂರಿನಲ್ಲಿಯೂ ಒಂದಿದೆ. ಇದೇ ರೀತಿಯಾಗಿ ಮದ್ರಾಸು, ಬೊಂಬಾಯಿ, ಕಲಕತ್ತಾ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಎಂಪೋರಿಯಮ್ ಪ್ರಾರಂಭಿಸಬೇಕು. ಮೈಸೂರು ಸಿಲ್ಕ್, ಮೈಸೂರು ಸೋಪ್, ಮೈಸೂರು ಲ್ಯಾಂಪ್ಸ್ ಹೀಗೆ ಅನೇಕ ಪದಾರ್ಥಗಳಿಗೆ ನಮ್ಮ ಮೈಸೂರು ಪ್ರಸಿದ್ಧವಾಗಿದೆ. ಇಲ್ಲಿ ತಯಾರಾಗುವ ಸಾಮಾನುಗಳ ವ್ಯಾಪಾರ ಮಾಡಿ ಹೆಚ್ಚು ಹಣಗಳಿಸಲು ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅನೇಕ ಕಡೆ ಕಮಿಷನ್ ಏಜೆಂಟ್ ನೇಮಕ ಮಾಡಿದ್ದೀರಿ. ಹೆಚ್ಚಿಗೆ ಕಮಿಷನ್ ಕೊಡುವುದರಿಂದ ಲಾಭಕಡಮೆಯಾಗುತ್ತದೆ.

ಸ್ವಾಮಿ, ಜಾಯಿಂಟ್ ಸ್ಟಾಕ್ ಕಂಪನಿಗಳ ಷೇರ್ಸ್ ಸರಕಾರದವರು ತೆಗೆದುಕೊಂಡು ಕೈಗಾರಿಕೆಗಳ ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ಅಥವಾ ಒಳ್ಳೆಯ ಕೆಲಸ. ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿ ಬಹು ಕಾಲದಿಂದ ಡಿವಿಡೆಂಡ್ ಸರಿಯಾಗಿ ಬರುತ್ತಿಲ್ಲ. ಏತಕ್ಕೆ ಬರುತ್ತಿಲ್ಲ ಎನ್ನುವುದನ್ನು ಆಲೋಚನೆ ಮಾಡಬೇಕು. ಏನು ಅನನುಕೂಲತೆಯಿದೆ ಎಂಬುದನ್ನು ಕಂಡುಹಿಡಿಯಬೇಕು. ಏಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ಪರಿಶೀಲಿಸಬೇಕು. ಸರಿಯಾಗಿ ಸೂಪರವಿಜನ್ ಇರಬೇಕು. ಆಡಿಟ್ ಆಗುತ್ತಿರಬೇಕು. ಇದರಲ್ಲಿಯ ಲೋಪದೋಷಗಳನ್ನು ಸರಿಪಡಿಸಬೇಕು. ಅಂದರೆ ಡಿವಿಡೆಂಡ್ ಬರದೇ ಇರತಕ್ಕಂಥಾದ್ದು, ತೀರಾ ಕಡಮೆಯಾಗಿ ಬರುತ್ತಿರುವುದು ತಪ್ಪುತ್ತದೆಂದು ನಾನು ಭಾವಿಸಿದ್ದೇನೆ. cottage industry, rural industry, small scale industry ಇವು ಯಾವ ರೀತಿ ನಡೆಯಬೇಕು. ಆ ರೀತಿ ನಡೆಯುತ್ತಿಲ್ಲವೆಂದು ನನ್ನ ಅಭಿಪ್ರಾಯ. ಇದರಲ್ಲಿರುವ ಮುಖ್ಯವಾದ ಒಂದು ದೋಷವನ್ನು ಶ್ರೀ ಸೂರ್ಯನಾರಾಯಣರಾವ್ ಅವರು ಹೇಳಿದ್ದಾರೆ. ನಮ್ಮದೊಂದು definite plan ಇಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಡ ಸರ್ವೇ ಮಾಡಿ ಯಾವ ಯಾವ ತಾಲ್ಲೂಕಿನಲ್ಲಿ ಏನೇನು ಕಚ್ಚಾವಾಲು ಸಿಕ್ಕುತ್ತದೆ, ಯಾವ ಕೈಗಾರಿಕೆಯನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಇದಕ್ಕಾಗಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನನಗೆ ಅನ್ನಿಸುತ್ತದೆ. ದೇಶಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಬೇಕು.

ಶ್ರೀ ಕೆ. ಮಲ್ಲಪ್ಪ.—ಮಾಡುತ್ತಾ ಇದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ಹಾಗಾದರೆ ಬಹಳ ಸಂತೋಷ. ಸಣ್ಣ ಪುಟ್ಟ ಕೈಗಾರಿಕೆಗಳಿಂದ ಜನಗಳ ಆರ್ಥಿಕ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಇಂಥ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂದು ಸಲಹೆ ಮಾಡುತ್ತೇನೆ.

Industrial Co-operatives ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. Industrial Co-operatives ಎಲ್ಲಿಯಾದರೂ ಚೆನ್ನಾಗಿ ಕೆಲಸ ಮಾಡುತ್ತಿವೆಯೋ ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲ. ಎಲ್ಲಿಯಾದರೂ ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ನಾನು ಬಹಳ ಸಂತೋಷಪಡುತ್ತೇನೆ. Industrial Co-operativesಗೆ ಬೇಕಾದಷ್ಟು ಹಣವನ್ನು ಸಾಲದ ರೂಪವಾಗಿ ಮತ್ತು ಗ್ರಾಂಟ್ ರೂಪವಾಗಿ ಸರ್ಕಾರದವರು ಕೊಟ್ಟಿದ್ದಾರೆ. ಅಲ್ಲಿ ಒಂದು ದೊಡ್ಡ ಕಷ್ಟ ಏನಾಗಿದೆ ಎಂದರೆ ಅವು Industries Department ಅಧೀನದಲ್ಲಿವೆಯೋ ಅಥವಾ Co-operative Department ಅಧೀನದಲ್ಲಿವೆಯೋ ಎನ್ನುವುದು ಒಂದು ಸಮಸ್ಯೆಯಾಗಿದೆ. Co-operative Societies Inspector ಹೋಗಿ ನೋಡಬೇಕು ಎಂದರೆ ನಮಗೆ ಸಂಬಂಧಪಟ್ಟದ್ದಲ್ಲವೆಂದು ಹೇಳುತ್ತಾರೆ. Industries Department ನವರು ಅವೆಲ್ಲ ಸಹಕಾರ ಇಲಾಖೆಗೆ ಸೇರಿದ್ದು, ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ಈ ಸಂಸ್ಥೆಗಳನ್ನು Joint Director of Industries ರಿಜಿಸ್ಟರ್ ಮಾಡುತ್ತಾರೆ. ಆದರೆ ಅವರು Supervision ಮಾಡುತ್ತಿಲ್ಲ. ಈ ಕೆಲಸ ಮಾಡುವವರು Registrar of Co-operative Societies. ಹೀಗೆ dual control ಇರುವುದರಿಂದ ಈ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲವೋ ಏನೋ! ಅವುಗಳ ಮೇಲೆ ತಕ್ಕಷ್ಟು supervision, ಸರಿಯಾದ ಆಡಿಟ್, ಇಲ್ಲವೋ ಏನೋ ಎಂದು ನನಗಾದರೂ ಅನ್ನಿಸುತ್ತದೆ.

ರೇಷ್ಮೆ ಕೈಗಾರಿಕೆ ಕೂಡ ಇದರಲ್ಲಿಯೇ ಬರುವುದರಿಂದ ಅದರ ಬಗ್ಗೆಯೂ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ರೇಷ್ಮೆ ಕೈಗಾರಿಕೆ ಅಭಿವೃದ್ಧಿಯಾಗಬೇಕಾದರೆ silk rearing centres ಸಾಧ್ಯವಾದಷ್ಟು ಮಟ್ಟಿಗೂ ಎಲ್ಲ ಕಡೆಯೂ ಏರ್ಪಾಡಾಗಬೇಕು. ಎರಡು ಪರೆವರೆಗೂ ಸರ್ಕಾರದವರೇ ಹುಳುವನ್ನು ತಮ್ಮ ನೇತೃತ್ವದಲ್ಲಿ ಬೆಳೆಸಿ ರೈತರಿಗೆ ಹಂಚಿದರೆ ಬಹಳ ಫಲ ಕೊಡುವುದಕ್ಕೆ ಸಹಾಯವಾಗುತ್ತದೆ. ಈಗ ಕೊಡುತ್ತಿರುವುದು ಬಿತ್ತನೆ ಮಾತ್ರ. ಅದನ್ನು rear ಮಾಡಬೇಕಾದರೆ ರೈತರಿಗೆ ಏನು ಅವಕಾಶವಿರಬೇಕೋ, ಏನು ಸಾಧನಗಳಿರಬೇಕೋ, ಏನು ಸನ್ನಿವೇಶವಿರಬೇಕೋ ಅವೆಲ್ಲ ಇಲ್ಲ. ಆದುದರಿಂದ silk rearing centreಗಳನ್ನು ಸಾಧ್ಯವಾದಷ್ಟೂ ಹೆಚ್ಚು ಕಡೆ ಸ್ಥಾಪನೆ ಮಾಡಿದರೆ ಬಹು ಮಟ್ಟಿಗೆ ರೇಷ್ಮೆ ಉತ್ಪಾದನೆ ಜಾಸ್ತಿಯಾಗುವುದಕ್ಕೆ ಅನುಕೂಲವಾಗುತ್ತದೆಂದು ನಾನು ಅಭಿಪ್ರಾಯಪಡುತ್ತೇನೆ.

ಮತ್ತೊಂದು ವಿಚಾರವನ್ನೂ ಸರ್ಕಾರದವರು ಯೋಚನೆ ಮಾಡಬೇಕಾಗಿದೆ ಏಕೆಂದರೆ ಕಷ್ಟಪಟ್ಟು ಉಪ್ಪುನೇರಳೆ ಸೊಪ್ಪನ್ನು ರೈತ ಬೆಳೆದು ಹುಳ ಸಾಕುತ್ತಾನೆ. ಅದಕ್ಕೆ ಬಹಳ ಶ್ರಮಪಡುತ್ತಾನೆ, ಹಗಲೂ ರಾತ್ರಿ ದುಡಿಯುತ್ತಾನೆ. ಗೂಡನ್ನು ಮಾರುವುದಕ್ಕೆ ಹೋದರೆ ಮಧ್ಯಸ್ಥಗಾರನಿರುತ್ತಾನೆ. ಈ ಮಧ್ಯಸ್ಥಗಾರನಿಗೆ ಹೊಟ್ಟೆ ತುಂಬುವಷ್ಟು ಬರುತ್ತದೆ, ರೈತನಿಗೆ ಏನೂ ಬರುವುದಿಲ್ಲ. ಬೇರೆಯವರು ಗೂಡನ್ನು ತೆಗೆದುಕೊಂಡು ಹೋಗಿ ರೇಷ್ಮೆ ತೆಗೆಯುತ್ತಾರೆ. ರೇಷ್ಮೆ ತೆಗೆದವನಿಗೆ ಎಷ್ಟು ಲಾಭ ಬರಬೇಕೋ ಅಷ್ಟು ಲಾಭ ಬರುವುದಿಲ್ಲ. ರೇಷ್ಮೆ ಕೊಳ್ಳುವವರೂ ಸಹ ಮಧ್ಯಸ್ಥಗಾರರೇ. ಈ ಎರಡು ಸಂದರ್ಭಗಳಲ್ಲಿಯೂ ಸೊಪ್ಪನ್ನು ಬೆಳೆದು, ಹುಳುಸಾಕಿ, ಗೂಡು ತಯಾರಿಸುವ ರೈತನಿಗೆ ಮತ್ತು ಗೂಡನ್ನು ಕೊಂಡು ರೇಷ್ಮೆ ತೆಗೆಯುವವರಿಗೆ ಎಷ್ಟು ಲಾಭ ಬರಬಹುದೋ ಅಷ್ಟನ್ನು ಅಥವಾ ಕೆಲವು ವೇಳೆ ಇನ್ನೂ ಹೆಚ್ಚು ಲಾಭವನ್ನು ಅಂಗಡಿಯಲ್ಲಿ ಕುಳಿತುಕೊಂಡಿರುವ ಮಧ್ಯಸ್ಥಗಾರನು ತೆಗೆದುಕೊಳ್ಳುತ್ತಾನೆ. ಸರ್ಕಾರವು ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಈ ರೀತಿ ಆಗುವುದನ್ನು ತಪ್ಪಿಸಬೇಕು. ಹಾಗೆ ಮಾಡಿದರೆ ರೇಷ್ಮೆ ಕೈಗಾರಿಕೆಗೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆಂದು ಹೇಳುತ್ತೇನೆ.

ರೇಷ್ಮೆ ಬೆಳೆ ಮಾಡತಕ್ಕ ರೈತರಿಗೆ ಬಾವಿ ತೋಡಲು ಹಣವನ್ನೊದಗಿಸುವುದರಲ್ಲಿ ಸ್ವಲ್ಪ discrimination ಇದೆಯೋ ಏನೋ ಎಂದು ನಾನಾದರೂ ಭಾವಿಸುತ್ತೇನೆ. ಎಲ್ಲೆಲ್ಲಿ ರೇಷ್ಮೆ ಕೈಗಾರಿಕೆಯಿದೆಯೋ ಅಂಥ ಕೆಲವು ತಾಲ್ಲೂಕುಗಳಲ್ಲಿ ಗ್ರಾಂಟ್, ಸಬ್ಸಿಡಿ ಎಲ್ಲ ಕೊಡುತ್ತಾರೆ. ಇನ್ನು ಕೆಲವು ತಾಲ್ಲೂಕುಗಳಲ್ಲಿ ಕೊಡುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ರಾಮನಗರ ತಾಲ್ಲೂಕಿನ ಇಬ್ಬರು ಮೂವರಿಗೆ ಗ್ರಾಂಟ್‌ಕೊಟ್ಟು ಪಕ್ಕದಲ್ಲಿರುವ ಚನ ಪಟ್ಟಣ ತಾಲ್ಲೂಕಿನಲ್ಲಿಯೂ ರೇಷ್ಮೆ ವ್ಯವಸಾಯವನ್ನು ಮಾಡುತ್ತಿದ್ದರೂ ಅಲ್ಲಿಗೆ ಕೊಟ್ಟಿಲ್ಲ. ಈ ತರಹ ತಾರತಮ್ಯ ಏಕೆ ತೋರಿಸುತ್ತಾರೆಯೋ ನನಗೆ ಅರ್ಥವಾಗಿಲ್ಲ. ಹತ್ತು ಲಕ್ಷ ಸಂಸಾರಗಳು ಈ ಉದ್ಯೋಗದಿಂದ ಬದುಕುತ್ತಿವೆ. ಸರ್ಕಾರದವರು ಅವರಿಗೆಲ್ಲ ಈ ವಿಧವಾದ ಉತ್ತೇಜನ ಕೊಟ್ಟು ಅವರ ಕಷ್ಟಕ್ಕೆ ಸರಿಯಾದ ಪ್ರತಿಫಲ ದೊರೆಯಲು ಏರ್ಪಾಡು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಬಾಬಿನ ಮೇಲೆ ಮಾತ ನಾಡುತ್ತ ಕೆಲವು ವಿಷಯಗಳನ್ನು ಹೇಳುತ್ತೇನೆ. ನಮ್ಮ ಸರ್ಕಾರದಲ್ಲಿ ಮೊದಲಿನಿಂದಲೂ ಸರ್ಕಾರ ದವರೇ ಅನೇಕ ಕೈಗಾರಿಕೆಗಳನ್ನು ಲಾಭದಾಯಕ ವಾಗಿ ನಡೆಸಿಕೊಂಡು ಬಂದು, ಈಚೆಗೆ ಕೂಡ ಅನೇಕ ಕೈಗಾರಿಕೆಗಳನ್ನು ಹೊಸದಾಗಿ ಪ್ರಾರಂಭಿಸಿದ್ದಾರೆ. ಆದರೆ ಅವುಗಳ ಪರಿಸ್ಥಿತಿ ಅಷ್ಟು ಆಶಾದಾಯಕ ವಾಗಿಲ್ಲ. ಈಗ ಸ್ವಲ್ಪಮಟ್ಟಿಗೆ ಉತ್ತಮವಾಗಿರ ಬಹುದು. ನಮ್ಮ ಸರ್ಕಾರದವರು ೭೯ ಕೈಗಾರಿಕೆ ಗಳಲ್ಲಿ ಆರುಕೋಟಿ ೭೯ ಲಕ್ಷ ರೂಪಾಯಿಗಳಷ್ಟು ಬಂಡವಾಳವನ್ನು ಹಾಕಿದ್ದಾರೆ. ಇದರಲ್ಲಿ ೪೪ ಕೈಗಾರಿಕೆಗಳು ಮಾತ್ರ ಅಲ್ಪ ಸ್ವಲ್ಪ ಲಾಭ ಕೊಡು ತ್ತಿವೆ. ಹದಿನಾರು ಲಕ್ಷ ರೂಪಾಯಿ ಲಾಭ ಎಂದರೆ ೨.೩ ಶೇಕಡ ಬಡ್ಡಿ ಬಂದ ಹಾಗೆ ಆಯಿತು. ಸರ್ಕಾರ ದವರು ಇದಕ್ಕಾಗಿ ಬೇಕಾದಷ್ಟು ಜನ ಡೈರೆಕ್ಟರ್ ಗಳನ್ನೂ ಜಾಯಿಂಟ್ ಡೈರೆಕ್ಟರ್‌ಗಳನ್ನೂ ಇಟ್ಟಿದ್ದಾರೆ. ಸರ್ಕಾರದವರೇ ನಡೆಸುತ್ತಿರುವ ಕೈಗಾರಿಕೆಗಳು ಸುಮಾರು ಇಪ್ಪತ್ತೊಂಬತ್ತು. ಇವುಗಳಲ್ಲಿ ಸುಮಾರು ಇಪ್ಪತ್ತು ಕೋಟಿ ರೂಪಾಯಿ ಬಂಡವಾಳ ಹಾಕಿದ್ದಾರೆ. ಲಾಭ ಬಂದಿರುವುದು ೩೭ ಲಕ್ಷ ರೂಪಾಯಿ ಮಾತ್ರ.

ಶ್ರೀ ಕೆ. ಮಲ್ಲಪ್ಪ.—ಯಾವ ವರ್ಷದ ಅಂಕಿಗಳನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ?

ಶ್ರೀ ಬಿ. ಹುಚ್ಚೇಗೌಡ.—1960-61ರ ಲೆಕ್ಕ ಪತ್ರಗಳ ಪ್ರಕಾರ ಹೇಳುತ್ತಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರು ಹೇಳುತ್ತಿರು ವುದು ಸರಿಯಲ್ಲ, ಅವರು 1959-60ರ ಲೆಕ್ಕ ನೋಡಿ ಹೇಳುತ್ತ ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ನಮಗೆ ಕೊಟ್ಟಿರುವ ಆಡಿಟ್ ರಿಪೋರ್ಟ್‌ನಿಂದ ಹೇಳುತ್ತಿದ್ದೇನೆ. ಸರ್ಕಾರ ದವರು ಸ್ವಂತವಾಗಿ ನಡೆಸತಕ್ಕ 29 ಕೈಗಾರಿಕೆಗಳಲ್ಲಿ 37,13,000 ರೂಪಾಯಿ ಲಾಭ ಬಂದಿದೆ. ಇದರಲ್ಲಿ ಹದಿನೇಳು ಬಹಳ ಲುಕ್ಸಾನಿನಲ್ಲಿ ಕೆಲಸ ಮಾಡುತ್ತಿವೆ. ಹನ್ನೆರಡರಲ್ಲಿ 37 ಲಕ್ಷ ರೂಪಾಯಿ ಎಂದರೆ 1.85 ಶೇಕಡ ಲಾಭ ಬಂದಿದೆ.

5-30 P.M.

ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನ ತಪಸೀಲು ಬೇಕಾ ದರೆ ಇಲ್ಲಿದೆ, ಕೊಡುತ್ತೇನೆ. "Budget for 1955 and also for 1956: Net profit for 1959-60 Rs. 4,98,482, for 1960-61 Rs. 1.75, 138, gross profit Rs. 27 lakhs. Net profit ಎಷ್ಟಿದೆ ಎಂದು ನೋಡಿಕೊಳ್ಳಿ. ಇನ್ನು Audit Account ತೆಗೆದುಕೊಳ್ಳುತ್ತೇವೆ. 1957ರ ಬಜೆಟ್ ದಯೆಯಿಟ್ಟು ನೋಡೋಣವಾಗಲಿ, ಇದು ತಪ್ಪು ಆದರೆ ಎಲ್ಲವೂ ತಪ್ಪು. ಈಗ ನಾನು ಹೇಳು ತ್ತಿರುವುದು 31-3-61ಕ್ಕೆ ಇರುವ ರಿಪೋರ್ಟಿನ ಮೇಲೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಬಂಡವಾಳ ಎಷ್ಟರಮಟ್ಟಿಗೆ ಇದೆಯೆಂದರೆ, ನಮ್ಮ ಲಯಬಲಿಟಿಗಳಿ ಗಿಂತ ಅಸೆಟ್ಸ್ ಹನ್ನೆರಡು ಕೋಟಿ ರೂಪಾಯಿ ಜಾಸ್ತಿ ಇದೆ. Excess of assets over liabilities, 1961-62ಕ್ಕೆ ರೂ. 17,33,00,000,000 ಇದೆ. ಇಂಥ ಲುಕ್ಸಾನು ಕಂಡು ಬಂದಿದೆ. ಬಂಡವಾಳದಲ್ಲಿ ಕೈಗಾರಿಕೆಗಳನ್ನು ಸೇರಿಸಿಕೊಂಡಿದ್ದಾರೆ, ಎರಡು ಕೆರೆ ಕಟ್ಟೆಗಳನ್ನು ಸೇರಿಸಿದ್ದಾರೆ. 20 ಸಾವಿರ ರೂಪಾಯಿ ಒಳಗಿರುವುದನ್ನು ಸೇರಿಸಿದ್ದಾರೆ. ಬಂಡ ವಾಳ ಎಷ್ಟು ಜಾಗ್ರತೆ ಕಡಮೆಯಾಗಿದೆ ನೋಡಿ. 1960-61ರಲ್ಲಿ 19 ಕೋಟಿ 87 ಲಕ್ಷ ರೂಪಾಯಿಗಳು, 1961-62ಕ್ಕೆ 17 ಕೋಟಿ 87 ಲಕ್ಷ ರೂಪಾಯಿ, 50 ಲಕ್ಷ ಕಡಮೆ. 1962-63ಕ್ಕೆ ಹನ್ನೆರಡು ಕೋಟಿ 84 ಲಕ್ಷ ಹೀಗೆ ಲೆಕ್ಕಾಚಾರವಾಗಿ ಸೇರಿಸಿ, ಎಷ್ಟಿದೆ ನೋಡಿ. ರೂ. 300 ಕೋಟಿ 74 ಲಕ್ಷ ಆಸ್ತಿ ಸೇರಿಸಿ ಬಂದಿದೆ. ಹನ್ನೆರಡು ಕೋಟಿ ರೂಪಾಯಿ ಹೆಚ್ಚು ಕಡಮೆ ಇದೆ. ಕೆಲವು ಕಡೆಗಳಲ್ಲಿ ಐದು ಸಾವಿರ ರೂಪಾಯಿ ಆಸ್ತಿ ಕೂಡ ಸೇರಿಸುವುದು ಬಿಟ್ಟಿಲ್ಲ. ನಮ್ಮ ಹಣಕಾಸಿನ ಪರಿಸ್ಥಿತಿ ಅಷ್ಟು ಸಮರ್ಪಕವಾಗಿಲ್ಲ. ಕೈಗಾರಿಕೆಗಳ ಮೇಲೆ ಹಾಕಿರುವ ಬಂಡವಾಳವನ್ನು ಸರಿಯಾಗಿ ನೋಡಿಕೊಳ್ಳಬೇಕು. ಇನ್ನು ಮುಂದಾದರೂ ನೋಡಿಕೊಳ್ಳದೆ ಹೋದರೆ, ದಿವಾಳಿ ಏಳುವುದಕ್ಕೆ ಬಹಳ ವರ್ಷಗಳು ಬೇಕಾಗಿಲ್ಲ. August 1961 ರಲ್ಲಿ Road Transport Corporation ಮಾಡಿ ಬಿಟ್ಟಿರಿ. ಅದರಿಂದ ಈಚೆಗೆ ಅದರ ಲೆಕ್ಕ ಕೊಟ್ಟಿಲ್ಲ. ಅದನ್ನು ಯಾವ ಬಾಬಿಗೆ ತೋರಿಸುತ್ತೀರಿ, ಅದನ್ನು ಯಾವ ಬುಕ್ಕಿನಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಆಮೇಲೆ ಬಡ್ಡಿ ವರ್ಷಕ್ಕೆ ಎರಡು ಕೋಟಿ ರೂಪಾಯಿ ಹೆಚ್ಚಾಗಿ ಕೊಡುತ್ತಿದ್ದೀರಿ. ಹೋದ ವರ್ಷ ಆರು ಕೋಟಿ 65 ಲಕ್ಷ ರೂಪಾಯಿ ಇದ್ದದ್ದು ಈ ವರ್ಷ ಆರು ಕೋಟಿ 70 ಲಕ್ಷ ರೂಪಾಯಿ ಆಗಿದೆ. ಇದರ ಜೊತೆಗೆ ಇಂಡಸ್ಟ್ರೀಗೆ ಕೊಡಬೇಕಾದ ಬಡ್ಡಿ ಬೇರೆ ಇದೆ. ಅದು ಹೆಚ್ಚು ಕಡಮೆ 2 ಕೋಟಿ ರೂಪಾಯಿವರೆಗೆ ಬರುತ್ತದೆ. ಅಲ್ಲಿಗೆ ಹೆಚ್ಚು ಕಡಮೆ 8 ಕೋಟಿ ರೂಪಾಯಿ ಬಡ್ಡಿ ಕೊಡಬೇಕು. ನಮಗೆ ಬರುವುದು ಆರು ಕೋಟಿ ಮಾತ್ರ. ಇದರಲ್ಲಿ ನಮ್ಮ ಸ್ಥಿತಿ ಎಷ್ಟರ ಮಟ್ಟಿಗೆ ಇದೆಯೆಂದು ತಿಳಿದುಕೊಳ್ಳಬಹುದು.

ಸರ್ಕಾರಿ ಆಡಳಿತ ಎಷ್ಟರಮಟ್ಟಿಗೆ ದಕ್ಷತೆಯಿಂದ ನಡೆಯ ಬೇಕೋ ಅಷ್ಟರಮಟ್ಟಿಗೆ ನಡೆಯುತ್ತಾ ಇಲ್ಲ. ನಮ್ಮಲ್ಲಿ Khadi and Village Industries Board ಎಂದು ಇದೆ. ಅದಕ್ಕೆ ಲೆಕ್ಕವನ್ನೇ ಕೊಟ್ಟಿಲ್ಲ. ಅದರಲ್ಲಿ ನಡೆದಿರತಕ್ಕಂಥ ವಿದ್ಯಮಾನಗಳ ಒಂದು ಕಾಸೂ ಬರುತ್ತಾ ಇಲ್ಲ. ಹಿಂದೂಸ್ತಾನ್ ಏರ್ ಕ್ರಾಫ್ಟಿಗೆ ಕೊಟ್ಟಿರುವುದು 60 ಲಕ್ಷ ರೂಪಾಯಿ ಅದ ರಿಂದ ಮೂರು ಕಾಸೂ ಬರುವುದಿಲ್ಲ. ಟೆಲಿಫೋನ್ ಫ್ಯಾಕ್ಟರಿಗೆ 35 ಲಕ್ಷ ರೂಪಾಯಿ ಕೊಟ್ಟಿದೆ. ಅದ ರಿಂದಲೂ ಒಂದು ಕಾಸು ಬರುವುದಿಲ್ಲ. ಇಷ್ಟೇ ಅಲ್ಲ. ನಮ್ಮ ಮೈಸೂರಿನವರು ಅವುಗಳಲ್ಲಿ ಕೆಲಸ ಮಾಡು ವುದಕ್ಕೂ ಅವಕಾಶವಿಲ್ಲ. ದೊಡ್ಡದಾಗಿ ಇಂಟೆಗ್ರೇಷನ್ ಎಂದು ಹೇಳುತ್ತಿದ್ದಾರೆ. ನಮ್ಮ ಮೈಸೂರು ಸರ್ಕಾರ ದವರು ಇಂಟೆಗ್ರೇಷನ್ ಎಂಬ ಪದ ಉಪಯೋಗಿಸು ವುದರಲ್ಲಿ ಬಹಳ ಬುದ್ಧಿವಂತರು. ಯಾವ ಇಂಡಸ್ಟ್ರಿಯಲ್ಲೇ ಆಗಲಿ, ಸರ್ವಿಸ್‌ನಲ್ಲಿಯೇ ಆಗಲಿ ನಮ್ಮ ಮೈಸೂರಿ ನವರಿಗೆ ಅವಕಾಶವಿಲ್ಲ. ನಮ್ಮ ರಾಜ್ಯದ ಐ.ಎ.ಎಸ್. ಕೇಡರಿನಲ್ಲಿ ಹೊರಗಡೆಯ ರಾಜ್ಯದವರೇ ತುಂಬಿದ್ದಾರೆ. ಹೋಗಲಿ, ನಮ್ಮ ಮೈಸೂರು ರಾಜ್ಯ ಎಷ್ಟು ಮಂದಿಗೆ ಇತರ ರಾಜ್ಯಗಳ ಸರ್ವೀಸಸ್ ಮತ್ತು ಕೈಗಾರಿಕೆಗಳಲ್ಲಿ ಅವಕಾಶವಿದೆಯೆಂದು ಪ್ರಶ್ನೆ ಹಾಕು ತ್ತೇನೆ. ನಮ್ಮ ರಾಜ್ಯದವರ ಕಷ್ಟಗಳನ್ನು ತಲೆಗೆ ಹಚ್ಚಿಕೊಂಡಿದ್ದೀರ? ಇವರ ಒಳ ಜಗಳದಲ್ಲಿ ದೇಶದ ಪರಿಸ್ಥಿತಿಯನ್ನು ಮನಸ್ಸಿಗೇ ತೆಗೆದುಕೊಂಡಿಲ್ಲ. ನಮ್ಮ ರಾಜ್ಯದಲ್ಲಿರುವ ಎಷ್ಟೋ ಕಾರ್ಖಾನೆಗಳಲ್ಲಿ ನಾವು ಪಾಲುಗಾರರು, ಬಂಡವಾಳ ಹಾಕಿದ್ದೇವೆ, ಆದರೆ ಅವುಗಳಲ್ಲಿ ನಮ್ಮ ರಾಜ್ಯದ ಜನಗಳಿಗೆ ಏನೇನೂ ಪ್ರಾತಿನಿಧ್ಯವಿಲ್ಲವೆಂದರೆ, ನಿಜವಾಗಿಯೂ ನಮ್ಮ ಯುವಕರು ಮುಂದಕ್ಕೆ ಬರುವ ಹಾಗಿಲ್ಲ. ನಮ್ಮ

ಲ್ಲಿಯೂ ಬೇಕಾದಷ್ಟು ಬುದ್ಧಿವಂತರು, ತಾಂತ್ರಿಕ ಜ್ಞಾನ ಪಡೆದವರು ಇದ್ದಾರೆ; ಅವರಿಗೆ ಯಾವ ಮಾರ್ಗವೂ ಇಲ್ಲ ಎಂಬ ಬಗ್ಗೆ ವಿವರಗಳನ್ನು ಕೊಟ್ಟು ಆಡಿಟ್ ಕಮಿಟಿಯವರು ತೀಕ್ಷ್ಣವಾಗಿ ಹೀಗೆ ಬರೆದಿದ್ದಾರೆ :—

"Accounts relating to cash books and cash bill books have not been maintained.

Stock account of materials purchased was not maintained.

Proper account of transport charges was not maintained.

There were no records to indicate the labourers to whom wages were paid on work relating to the Exhibition."

ಇನ್ನೂ ಬೇಕಾದಷ್ಟು ಹೀಗೆಯೇ ಇವೆ. ಇಂಥ ಸೀರಿಯಸ್ ತಪ್ಪುಗಳು ಬಂದಿರುವಾಗ್ಯೂ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಬಿಟ್ಟಿದೆ. ಯಾವ ವ್ಯವಹಾರವನ್ನೂ ಆಯಾ ದಿವಸವೇ ಸರಿಮಾಡದೆ ಮುಂದಕ್ಕೆ ಬಿಟ್ಟರೆ, ಅದು ಮುಂದೆ ಸರಿಹೋಗುವುದಿಲ್ಲ. ಎಲ್ಲಿ ಒಂದು ತಗಲೂಫಿ ಬಂದಿದೆ ಅದನ್ನು ಕೂಡಲೇ ಸರಿಮಾಡುವುದು ಸರ್ಕಾರದ ಕರ್ತವ್ಯ. ಅದಕ್ಕೆ ಅರ್ಥಸಚಿವರು, ಹೇಳಿದರು, ಯಾರು ೨೫ ಸಾವಿರ ರೂಪಾಯಿ ತೆಗೆದುಕೊಂಡಿದ್ದಾರೋ, ಅವರಿಗೆ ನೋಟಿಸ್ ಕೊಟ್ಟಿದ್ದೇವೆಂದು, ಈ ರೀತಿ ಒಣ ಸಬೂಬುಗಳನ್ನು ಹೇಳಿ ಎಷ್ಟು ದಿವಸ ರಾಜ್ಯ ಆಳುವುದಕ್ಕೆ ಸಾಧ್ಯ? ಈ ತರಹ ಇನ್ನು ಮುಂದೆ ನಡೆದುಕೊಂಡು ಹೋದರೆ ಯಾವುದೂ ಕೂಡ ಉಳಿಯುವುದಿಲ್ಲ.

ಈಗ ಇಲ್ಲಿ ಕೊಟ್ಟಿರುವ 35 ಬಾಬುಗಳಲ್ಲಿ ಒಳ್ಳೆಯ ಭವಿಷ್ಯವಿಲ್ಲವೆಂದು ವ್ಯಥೆಯಿಂದ ಹೇಳಬೇಕಾಗಿದೆ.

ಈಗ ನಾವು ಯಾವ ಯಾವ ಕಂಪನಿ ಲಾಭದಾಯಕವಾಗಿ ನಡೆಯಬೇಕು ಅಥವಾ ಯಾವುದನ್ನು ಅಭಿವೃದ್ಧಿ ಮಾಡಬೇಕು ಎಂಬುದರ ಬಗ್ಗೆ ಒಂದು ಯೋಜನೆ ಇಟ್ಟುಕೊಳ್ಳಬೇಕು. ಹತ್ತಾರು ವರ್ಷಗಳಿಂದ, ದಿವಸ ದಿವಸಕ್ಕೆ ಕಾರ್ಖಾನೆಗಳಿಂದ ಮತ್ತಿತರ ಬಾಬುಗಳಿಂದ ದುಡ್ಡು ನಷ್ಟವಾಗುತ್ತಿದ್ದರೆ ಸುಮ್ಮನೆ ನೋಡಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಉದಾಹರಣೆಗೆ ಎಷ್ಟೋ ಹೇಳಬಹುದು. ನಮ್ಮ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿಗೆ ಎರಡು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದರಲ್ಲಿ 20 ಸಾವಿರ ರೂಪಾಯಿ ಒಂದು ವರ್ಷಕ್ಕೆ ಹೋಗಿದೆ, 1959-60 ರಲ್ಲಿ, ಒಂದು ವರ್ಷಕ್ಕೆ ಹೋಗಿದೆ. ಇನ್ನೊಂದು ಉದಾಹರಣೆಯೆಂದರೆ ರೂಪಾಯಿ 8,66,000ಗೆ, 30 ಸಾವಿರ ರೂಪಾಯಿ ಅದೇ ಇಲಾಖೆಯಲ್ಲಿ ಹೋಗಿದೆ. ಈ ಬಂಡವಾಳ ಪೂರ್ತಿ ಹೋಗುವುದಕ್ಕೆ ಇನ್ನು 5-6 ವರ್ಷ ಸಾಕು. ಈಗಲಾದರೂ ಸರ್ಕಾರದವರು ಎಚ್ಚೆತ್ತು ಇಂಥ ಒಂದು ಅವ್ಯವಸ್ಥೆಯನ್ನು ನಿಲ್ಲಿಸಿ, ಮುಂದೆ ಸರಿಯಾದ ಮಾರ್ಗದಲ್ಲಿ ನಡೆಯಬೇಕು.

ನಮ್ಮ ದೇಶದಲ್ಲಿ ಮೊದಲಿನಿಂದಲೂ ಉದ್ಯಮಗಳು ಸರ್ಕಾರದ ಮೇಲ್ವಿಚಾರಣೆಯಲ್ಲಿ ನಡೆಯುತ್ತಾ ಇವೆ. ನಮ್ಮ ಸೋಪ್ ಫ್ಯಾಕ್ಟರಿ ಯಾವಾಗಲೂ ಲಾಭದಾಯಕವಾಗಿ ನಡೆದಿದೆ ಮತ್ತು ಎಲೆಕ್ಟ್ರಿಕ್ ಫ್ಯಾಕ್ಟರಿ ಈಗ ಸ್ವಲ್ಪಮಟ್ಟಿಗೆ ಲಾಭ ತೋರಿಸುವ ಪರಿಸ್ಥಿತಿಗೆ ಬರುತ್ತಿದೆ. ಅದರಲ್ಲಿ ಹಾಗೆ 12 ಲಕ್ಷ ರೂಪಾಯಿನ ವರೆಗೂ ಲುಕ್ಸಾನು ಆಗಿದೆ. ಅದೊಂದನ್ನೂ ಕೂಡ ಇವರು ನೋಡದೆ ಸುಮ್ಮನೆ ಉದ್ದಕ್ಕೂ ಯಾವುದಾವುದೋ ಯೋಜನೆಯ ಕಾರ್ಯಗಳನ್ನು ಹಾಕಿಕೊಂಡು ಹೋಗುತ್ತಿದ್ದಾರೆ. ಅದರ ಏನಾದರೂ ಸರಿಹೋಗುತ್ತದೆ ಎನ್ನುವುದು ಒಂದೂ ಅರ್ಥವಾಗುವುದಿಲ್ಲ.

ಇಷ್ಟು ಹೇಳಿ, ಈ ಸಂದರ್ಭದಲ್ಲಿ ಬಂಡವಾಳ ಹಾಕಬೇಕಾದರೂ ಕೂಡ ನಾವು ಸ್ವಲ್ಪ ಯೋಚನೆ ಮಾಡಬೇಕು. ಭದ್ರಾವತಿಯಲ್ಲಿ ಅನೇಕ ಸಿಂಟರಿಂಗ್ ಫ್ಯಾಕ್ಟರಿ ಇದೆ. ಆದರೆ ಸಿಂಟರಿಂಗ್ ಪ್ಲಾಂಟಿಂಗ್ ಹಾಕಬೇಕೆಂದು 3-4 ವರ್ಷಗಳಿಂದ ಮೆಷಿನರಿಗಳನ್ನು ತಂದಿದ್ದರೂ ಕೆಲಸವಾಗದೆ ತುಂಬಾ ಲುಕ್ಸಾನು ಆಗುತ್ತಿದೆ. ಅದಕ್ಕೆ ಬೇಕಾದ ತಾಂತ್ರಿಕ ಜ್ಞಾನ ಪಡೆದಿರುವಂತಹ ಸಿಬ್ಬಂದಿ ಇಟ್ಟುಕೊಂಡು ಕೆಲಸ ಮಾಡಬೇಕು. ಅಲ್ಲಿನ ಕೆಲಸ ಕಾರ್ಯಗಳು ಹಿಂದೆ ಬಿದ್ದಿವೆ. ನಮ್ಮ ಭದ್ರಾವತಿ ಇಷ್ಟರಮಟ್ಟಿಗೆ ಯಶಸ್ವಿಯಾಗಿದ್ದು ಸರ್. ಎಂ. ವಿಶ್ವೇಶ್ವರಯ್ಯನವರ ಒಂದು ಘನೋದ್ದೇಶದಿಂದ ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಅವರೇ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರು. ಅದನ್ನು ಇವತ್ತು ನಾವೆಲ್ಲರೂ ನೋಡುತ್ತಿದ್ದೇವೆ. ಇಂಡಿಯಾ ದೇಶದಲ್ಲಿ ಇದು ಗಾತ್ರದಲ್ಲಿ ಒಂದು ಚಿಕ್ಕದಾಗಿದ್ದರೂ ಒಳ್ಳೆಯ ಹೆಸರು ಪಡೆದಿದೆ. ಇದರಲ್ಲಿ ಒಳ್ಳೆಯ ಉಕ್ಕನ್ನು ಸ್ಪೆಷಲ್ಲಾಗಿ ಮಾಡಬೇಕೆಂದು ವ್ಯವಸ್ಥೆ ಮಾಡಿದ್ದಾರೆ. ಕೇಂದ್ರ ಸರ್ಕಾರದ ಪ್ರಭಾವಕ್ಕೊಳಗಾದರೆ ನಮ್ಮ ದೇಶದಲ್ಲಿ ಏನೊಂದು ಅಭಿವೃದ್ಧಿ ಕಾರ್ಯವನ್ನೂ ಮಾಡುವುದಕ್ಕಾಗುವುದಿಲ್ಲ. ಅಲ್ಯೂಮಿನಿಯಂ ಕಾರ್ಖಾನೆಯನ್ನು ಸ್ಥಾಪಿಸಿ ಎಷ್ಟೋ ಅಭಿವೃದ್ಧಿ ಮಾಡಬಹುದು. ಆದರೆ ಅದಕ್ಕೆ ಯಾವ ವಿಧವಾದ ಪ್ರೋತ್ಸಾಹವನ್ನೂ ಸರ್ಕಾರದವರು ಮಾಡುತ್ತಿಲ್ಲ. ಅಭಿವೃದ್ಧಿಯಾಗಲಿ ಆಗದೆ ಇರಲಿ, ಸರ್ಕಾರದವರು ಈ ಕಾರ್ಖಾನೆಗಳ ಅಭಿವೃದ್ಧಿಯ ವಿಷಯದಲ್ಲಿ ಉದಾಸೀನ ಮಾಡಿದರೆ ಖಂಡಿತ ದೇಶದ ಆರ್ಥಿಕ ಪರಿಸ್ಥಿತಿಗೆ ಧಕ್ಕೆಯುಂಟಾಗುತ್ತದೆ. ಈಗಲಾದರೂ ಸರ್ಕಾರದವರು ಎಚ್ಚೆತ್ತು ತಕ್ಕ ವ್ಯವಸ್ಥೆಯನ್ನು ಮಾಡದಿದ್ದರೆ ಖಂಡಿತವಾಗಿ ದೇಶದ ಆರ್ಥಿಕ ಸ್ಥಿತಿ ದಿವಾಳಿಯಾಗುತ್ತದೆಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ಜೆ. ಎಲ್. ಚಬಾಡಿ.—ಮಾನ್ಯ ಸಭಾಪತಿಗಳೇ, ಈ ಕೈಗಾರಿಕೆ ಬೇಡಿಕೆಯ ಮೇಲೆ ನಾನು ಮಾತನಾಡುವುದಕ್ಕೆ ಮುಂಚೆ ಇದನ್ನು ಅನುಮೋದಿಸುತ್ತಾ, ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈಗ ಪಾಂಚವಾರ್ಷಿಕ ಯೋಜನೆಗಳಲ್ಲಿ ಈ ಕೈಗಾರಿಕೆಗಳ ಬಗ್ಗೆ ಬೇಕಾದಷ್ಟು ಹಣವನ್ನು ಸರ್ಕಾರದವರು ಒದಗಿಸಿದ್ದರೂ ಸಹ ಹೆಚ್ಚು ಹಣ ಖರ್ಚಾಗದೆ ಸುಗಮವಾಗಿ ಅನೇಕ ಯೋಜನೆಗಳ ಕೆಲಸ ಕಾರ್ಯಗಳು ಇಂಪ್ಲಿಮೆಂಟ್ ಮಾಡದೆ ಎಷ್ಟೋ ಹಣ ಉಳಿದದು ಉಂಟು. ಈರೀತಿಯಾಗಿ ಲ್ಯಾಪ್ಸ್ ಆಗಿರುವುದೂ ಉಂಟೆಂದು ನಾನು ಹೇಳುತ್ತೇನೆ. ಈ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಎಷ್ಟೋ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕೆಂದು ತಿಳಿದು ಸಾಕಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದರೂ ಕೆಲವೊಂದು ಸ್ಕೀಮುಗಳ ಪ್ರಕಾರ ಯಾವ ಯೋಜನೆ ತೆಗೆದುಕೊಳ್ಳಬೇಕೋ ಅದರ ಬಗ್ಗೆ ಏನಾದರೂ ಒಂದು ರೀತಿಯಲ್ಲಿ ಸರ್ವೆ ಮಾಡಿ ಯಾವ ಒಂದು ಸ್ಕೀಮನ್ನು ತೆಗೆದುಕೊಳ್ಳುತ್ತಿಲ್ಲ. ಸುಮ್ಮನೆ ಇಲ್ಲಿ ಯಾವ ಬೇಡಿಕೆ ಹೇಗೆ ಬರುತ್ತದೋ ಅದರ ಬಗ್ಗೆ ವಿಚಾರ ಮಾಡುತ್ತಿದ್ದೇವೆಂದು ನಾನು ಹೇಳುತ್ತೇನೆ. ಇವೊತ್ತು ನಮ್ಮ ದೇಶದಲ್ಲಿ ಸೋಲು ನೇಯುವ ಕೈಗಾರಿಕೆಯೇ

(ಶ್ರೀ ಜೆ. ಎಲ್. ಕಬಾಡಿ)

ಪ್ರಥಮ ಕೈಗಾರಿಕೆಯೆಂದು ನಾನು ಹೇಳುತ್ತೇನೆ. ಎರಡನೆಯದು ಚರ್ಮ ಕೈಗಾರಿಕೆಯೆಂದು ಹೇಳಿದರೆ ಏನೂ ತಪ್ಪಾಗಲಾರದು. ಚರ್ಮ ಕೈಗಾರಿಕೆಗೆ ಸರ್ಕಾರದವರು ಕೊಡುತ್ತಿರುವ ಪ್ರೋತ್ಸಾಹ, ಪ್ರಾಶಸ್ತ್ಯ ಏನೇನು ಸಾಲದು, ಸಾಕಷ್ಟು ಲಕ್ಷ್ಯ ಕೊಡುತ್ತಾ ಇಲ್ಲ. ಬೊಂಬಾಯಿ ರಾಜ್ಯದಲ್ಲಿ ಚರ್ಮದ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹವಿದೆ. ಚರ್ಮದ ಕೈಗಾರಿಕೆಗಳಿಂದ ತಯಾರಾದ ಸಾಮಾನುಗಳಿಗೂ ಅಲ್ಲಿ ಒಳ್ಳೆಯ ಬೆಲೆ ಇದೆ. ಈ ಸಾಮಾನುಗಳನ್ನು ಮಾಡುವುದಕ್ಕಾಗಿ ಒಂದು ಶಾಲೆಯನ್ನೆ ತೆರೆದಿದ್ದಾರೆ. ಈ ರೀತಿಯಲ್ಲಿ ಉದ್ಯೋಗದಲ್ಲಿ ನಿರತರಾದವರಿಗೆ ಉದ್ಯೋಗಗಳನ್ನು ಕೊಡುವುದರ ಜೊತೆಗೆ ವಿದ್ಯಾ ವೇತನ ಕೊಟ್ಟು ವಿಧ್ಯಾರ್ಥಿಗಳಿಗೆ ಸಾಕಷ್ಟು ಈ ಬಗ್ಗೆ ಶಿಕ್ಷಣ ಕೊಟ್ಟು ಈ ಉದ್ಯಮವನ್ನು ಹೇಗಾದರೂ ಮಾಡಿ ಅಭಿವೃದ್ಧಿಗೆ ತರಬೇಕೆಂಬ ದೃಷ್ಟಿಯನ್ನು ಅವರು ಇಟ್ಟುಕೊಂಡಿದ್ದಾರೆ. ಆದರೆ ಮದ್ರಾಸಿನಲ್ಲಿಯೂ ಈ ಉದ್ಯಮದ ಸಲುವಾಗಿ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಕೇಂದ್ರ ಸರ್ಕಾರದ ಸಹಾಯದಿಂದ ಅಲ್ಲಿ ಒಂದು ಉದ್ಯೋಗ ಶಾಲೆಯನ್ನು ತೆಗೆದು ಈಗ ಇಡೀ ದೇಶಕ್ಕೇ ಒಂದು ಶಿಕ್ಷಣ ಕೊಡತಕ್ಕ ಪದ್ಧತಿಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಆದರೆ ನಮಲ್ಲಿ ಈ ತರಹ ಚರ್ಮದ ಕೈಗಾರಿಕೆಗೆ ಪ್ರೋತ್ಸಾಹವೇ ಸಿಕ್ಕಲಿಲ್ಲ. ಇಷ್ಟೇ ಅಲ್ಲ. ಈ ಕೈಗಾರಿಕೆಯ ಬೆಳವಣಿಗೆಗಾಗಿ ಸೊಸೈಟಿಗಳ ಮುಖಾಂತರ ಫೈನಾನ್ಸಿಯಲ್ ಕಾರ್ಪೊರೇಷನ್ನನ್ನು ಸಾಲ ಬೇಡಿದರೆ ಅದಕ್ಕೆ ಇದುವರೆಗೂ ಒಂದು ಕಾಸನ್ನೂ ಸಹ ಕೊಡಲಿಲ್ಲವೆಂಬುದು ಫೈನಾನ್ಸಿಯಲ್ ಕಾರ್ಪೊರೇಷನ್ನಿನವರ ವರದಿಯಲ್ಲಿಯೇ ಕಂಡು ಬರುತ್ತದೆ. ಆದ್ದರಿಂದ ಸರ್ಕಾರದವರು ಈ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ, ಸಹಾಯ ಕೊಟ್ಟರೆ, ಅನೇಕರಿಗೆ ಉದ್ಯೋಗಗಳು ದೊರೆಯುತ್ತವೆ ಮತ್ತು ದೇಶದ ಉತ್ಪತ್ತಿ ಜಾಸ್ತಿಯಾಗುತ್ತದೆ.

ಇನ್ನು ನಮ್ಮ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಸಲುವಾಗಿಅದರಲ್ಲೂ ನಮ್ಮ ಖಾದಿ ಬೋರ್ಡಿಗೆ ಕೊಡುವ ಮ್ಯಾನೇಜ್‌ಮೆಂಟ್ ಸಬ್‌ಸಿಸ್ಟೆನ್ಸ್ ಅಲೋಯನ್ಸ್ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ಇವತ್ತು ಖಾದಿ ಬೋರ್ಡ್ ಚೇರ್‌ಮನ್ನರಿಗೆ 20 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದನ್ನು ವಸೂಲು ಮಾಡುವುದಕ್ಕೋಸ್ಕರ ಒಂದು ನೋಟೀಸ್ ಕೊಟ್ಟಿದ್ದಾರೆಂಬ ಪಶ್ನೆ ಬಂತು. ಅಲ್ಲಿನ ವಿಷಯಗಳು ನಾನು ಖಾದಿ ಬೋರ್ಡ್ ಮೆಂಬರಾಗಿದ್ದಾಗ ನನಗೆ ಗೊತ್ತಿದೆ, ಚೇರ್ ಮನ್ನರಿಗೆ 250 ರೂಪಾಯಿಗಳ ಮನೆ ಬಾಡಿಗೆ ಅಲೋಯನ್ಸ್ 200 ರೂಪಾಯಿ ಇತರ ಅಲೋಯನ್ಸ್ ಮತ್ತು 300 ರೂಪಾಯಿಗಳು ಆನರೇರಿಯಂ-ಹೀಗೆ ಒಟ್ಟು ತಿಂಗಳಿಗೆ 750 ರೂಪಾಯಿಗಳನ್ನು ಕೊಡಬೇಕೆಂದು ನಿಗದಿ ಮಾಡಿದ್ದರು. ಆದರೆ ಹೀಗೆ 750 ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದಾಗ್ಗೆ ಚೇರ್‌ಮನ್ ಅವರು ಆಗ ಹೇಳಿದರು. ಈ ತರಹ ಬಿಡಿ ಬಿಡಿಯಾಗಿ ಸಂಬಳ ಒಡೆದು ಹೇಳುವುದಾದರೆ ನಾನು ಅದನ್ನು ಸ್ವೀಕರಿಸಲಿಕ್ಕೆ ತಯಾರು ಇಲ್ಲ. 750 ರೂಪಾಯಿಗಳನ್ನು ನಗದು ಕೊಡುವುದಾದರೆ ಸ್ವೀಕಾರ ಮಾಡುತ್ತೇನೆಂದು ತಿಳಿಸಿದರು. ಆಗ ಸರ್ಕಾರದವರು 750 ರೂಪಾಯಿಗಳನ್ನು ಅವರ ಅಭಿಪ್ರಾಯದಂತೆಯೇ ಕೊಟ್ಟಿದ್ದಾರೆ. ಯಾವ ಅಡ್ಡಿಯೂ ಇಲ್ಲದೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದರು. ಅನಂತರ ಈ ಬಗ್ಗೆ ಆಡಿಟ್ ಅಬ್‌ಜೆಕ್ಷನ್ ಬಂದಾಗ ಅಲ್ಲಿದ್ದ ಅಕೌಂಟ್ಸ್ ಆಫೀಸರ್ಸ್ ಆಡಿಟ್ ಕಾಲಕ್ಕೆ ಸರ್ಕಾರದವರ ಪತ್ರದ ಮೇರೆಗೆ ಆ ಒಂದು ಹಣ ತಗೆದುಕೊಂಡ ಬಗ್ಗೆ ಆಡಿಟರಿಗೆ ತೋರಿಸ ಬಹುದಾಗಿತ್ತು. ಆದರೆ ಆ ಅಕೌಂಟ್ಸ್ ಆಫೀಸರ್ ಏಕೆ ತೋರಿಸಲಿಲ್ಲವೋ ನನಗೆ ಗೊತ್ತಾಗಲಿಲ್ಲ. ಅದು ಇನ್ನೂ ಆಡಿಟ್ ಅಬ್‌ಜಕ್ಷನ್ಸ್‌ನಲ್ಲಿ ಇದೆಯೆಂದು ಕೆಲವು ಸದಸ್ಯರು ರೈಜ್ ಮಾಡಿದ್ದರೆಂದು ನನಗೆ ಕಾಣುತ್ತದೆ.

ಶ್ರೀ ಸಿ. ಜೆ. ಮುಕ್ಕಣಪ್ಪ.—ಅವರಿಗೆ ನೋಟೀಸ್ ಕೊಟ್ಟಿದ್ದೇವೆಂದು ಸರ್ಕಾರದವರೇ ಹೇಳಲಿ.

ಶ್ರೀ ಜೆ. ಎಲ್. ಕಬಾಡಿ.—ಆ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸತಕ್ಕ ಬೋರ್ಡಿನ ಪರಿಸ್ಥಿತಿ ಯಾವ ರೀತಿ ಇದೆಯೆಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈಗ ಬಿಜಾಪುರದಲ್ಲಿ ಕೈಗಾರಿಕೆಗಳಿಗೆ ಸಾಕಷ್ಟು ಸ್ಕೋಪ್ ಇದ್ದರೂ ಸರ್ಕಾರದವರು ಯಾವ ರೀತಿಯಲ್ಲೂ ಕೈಗಾರಿಕೆಗಳ ಯೋಜನೆಯನ್ನು ತೆಗೆದುಕೊಂಡಿಲ್ಲ. ಅಲ್ಲಿ ಒಂದೆರಡು ಸ್ಪಿನ್ನಿಂಗ್ ಮಿಲ್‌ಗಳನ್ನು ಸ್ಥಾಪನೆ ಮಾಡಬೇಕೆಂದು ಲೈಸೆನ್ಸ್ ತೆಗೆದುಕೊಂಡರು. ಆಲೈಸನ್ಸ್ ನಾಲ್ಕು ವರ್ಷಗಳಿಂದಲೂ ಹಾಗೆಯೇ ಬಿದ್ದಿದೆ. ಇಲ್ಲಿಯವರೆಗೂ ಆ ಸ್ಪಿನ್ನಿಂಗ್ ಮಿಲ್ಲುಗಳನ್ನು ಪ್ರಾರಂಭ ಮಾಡುವುದಕ್ಕೆ ಬೋರ್ಡ್ ಆಫ್ ಡೈರೆಕ್ಟರ್ಸನ್ನು ನೇಮಕ ಮಾಡಲಿಲ್ಲ. ಅದ್ದರಿಂದ ಕೂಡಲೇ ಸರ್ಕಾರದವರು ಈಗಾದರೂ ಅವನ್ನು ನೇಮಕಮಾಡಿ ಆ ಸ್ಪಿನ್ನಿಂಗ್ ಮಿಲ್ಲುಗಳನ್ನು ವರ್ಕಿಂಗ್ ಕಂಡೀಷನ್‌ಗೆ ತರಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡುತ್ತೇನೆ. ಚರ್ಮ ಕೈಗಾರಿಕೆಯ ಅಭಿವೃದ್ಧಿಯ ಸಲುವಾಗಿ ಒಂದು ಚರ್ಮ ಕೈಗಾರಿಕೆಗಳ ಬೋರ್ಡ್ ರಚನೆ ಮಾಡಬೇಕೆಂದು ಸಾಕಷ್ಟು ಒತ್ತಾಯ ಮಾಡುತ್ತಿದ್ದರೂ ಸರ್ಕಾರದವರು ಇಲ್ಲಿಯವರೆಗೂ ಅದನ್ನು ರಚನೆ ಮಾಡಲಿಲ್ಲ. ಆದ್ದರಿಂದ ಸರ್ಕಾರದವರಲ್ಲಿ ನನ್ನ ವಿನಂತಿ ಏನೆಂದರೆ ಕೂಡಲೆ ಆ ಒಂದು ಬೋರ್ಡನ್ನು ರಚಿಸಿ, ಈ ಕೈಗಾರಿಕೆಯನ್ನು ಯಾವ ರೀತಿ ಅಭಿವೃದ್ಧಿಗೆ ತರಬೇಕೆಂಬ ಬಗ್ಗೆ ಸೂಕ್ತವಾದ ಏರ್ಪಾಡುಗಳನ್ನು ಮಾಡಬೇಕು.

ಇನ್ನು ಚರ್ಮದ ಕೈಗಾರಿಕೆಗೆ ಯಾವರೀತಿಯಲ್ಲಾದರೂ ಅಭಿವೃದ್ಧಿಗೆ ತರುವುದಕ್ಕೆ ಬದಲು ಆತಂಕವನ್ನು ತಂದೊಡ್ಡುತ್ತಿದ್ದಾರೆ. ಚರ್ಮದ ಕೈಗಾರಿಕೆಯ ಅಭಿವೃದ್ಧಿಗೆ ಸಾಕಷ್ಟು ಸ್ಕೋಪ್ ಸರ್ಕಾರದಲ್ಲಿಲ್ಲವೆಂದು ನಾನು ಮತ್ತೊಂದು ಸಾರಿ ಹೇಳಬೇಕಾಗಿದೆ. ಈ ಕೈಗಾರಿಕೆಗೆ ಸೇಲ್ಸ್‌ಟ್ಯಾಕ್ಸ್ ಹಾಕುವುದನ್ನು ತಪ್ಪಿಸಬೇಕು. ಈ ಕೈಗಾರಿಕೆಗೆ ಹಾಕತಕ್ಕ ಮಾರಾಟ ತೆರಿಗೆಯನ್ನು ಹಿಮ್ಮೆಟ್ಟಿಸಬೇಕು. ಕೂಡಲೇ ಸರ್ಕಾರದವರು ಈ ಕೈಗಾರಿಕೆಗೆ ಹಾಕತಕ್ಕ ಮಾರಾಟ ತೆರಿಗೆಯನ್ನು ತೆಗೆದು ಹಾಕಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಈ ಉದ್ಯಮದ ಬೆಳವಣಿಗೆಗೆ ಆದಷ್ಟು ಜಾಗ್ರತೆ ಪ್ರೋತ್ಸಾಹ ಕೊಡಬೇಕು. ಇನ್ನು ಈಗ ಕ್ವಾಲಿಟಿ ಮಾರ್ಕೆಟಿಂಗ್ ಸ್ಕೀಂ ಎಂಬುದಾಗಿ ನಮಲ್ಲಿ ಮಾಡಿಕೊಂಡಿದ್ದಾರೆ. ಈ ಸ್ಕೀಮನ್ನು ಮಧ್ಯ ಪ್ರದೇಶದಲ್ಲಿ ಬಹಳ ಅತ್ಯುತ್ತಮವಾಗಿ ನಡೆಸುತ್ತಿದ್ದಾರೆ. ಅಲ್ಲಿ ಪ್ರತಿಯೊಂದು ಕೈಗಾರಿಕೆಗೂ ಕ್ವಾಲಿಟಿಯನ್ನು ಏರ್ಪಡಿಸುವ ವ್ಯವಸ್ಥೆ ಮಾಡಿದ್ದಾರೆ. ಒಂದನೆ, ಎರಡನೆ, ಮತ್ತು ಮೂರನೆಯ ಕ್ವಾಲಿಟಿ ಯಾವುದು ಎಂಬ ಬಗ್ಗೆ ಸರಕುಗಳನ್ನು ಆಯಾ

ಉದ್ಯಮದ ಇನ್ಸ್ಪೆಕ್ಟರುಗಳಿಗೆ ವಹಿಸಿಕೊಟ್ಟು ಅವು ಎಂತಹ ಕ್ವಾಲಿಟಿಗೆ ಅರ್ಹವಾಗಿರುತ್ತವೆ ಎಂಬುದನ್ನು ಪರೀಕ್ಷೆ ಮಾಡಿಸುತ್ತಿದ್ದಾರೆ. ಅದರಲ್ಲಿಯೂ ಬಹಳ ತಜ್ಞರಾದಂಥ ಇನ್ಸ್ಪೆಕ್ಟರುಗಳನ್ನು ತಯಾರಾಗತಕ್ಕ ಮಾನ ಪರಿಶೀಲನೆಗಾಗಿ ನೇಮಿಸುತ್ತಾರೆ. ಚರ್ಮದ ಕೈಗಾರಿಕೆಯನ್ನು ಮಾಡುವಾಗಲೂ, ಆ ಕೈಗಾರಿಕೆಯಿಂದ ತಯಾರಾಗತಕ್ಕ ಚರ್ಮದ ಸಾಮಾನುಗಳ ಮೇಲೂ, ಚಪ್ಪಲಿಗಳ ಮೇಲೂ ಇದು ಫಸ್ಟ್ ಕ್ವಾಲಿಟಿ, ಸೆಕೆಂಡ್ ಕ್ವಾಲಿಟಿ, ಮೂರನೆ ಕ್ವಾಲಿಟಿ ಎಂದು ಮಾರ್ಕ್ ಹಾಕುತ್ತಾರೆ. ಆ ರೀತಿ ತಯಾರು ಮಾಡುವುದರಿಂದ ಅದನ್ನು ಪೇಟೆಯಲ್ಲಿ ಮಾರುವ ಕಾಲಕ್ಕೆ ಕೊಳ್ಳುವ ಜನರಿಗೆ ಇಂತಹ ಕ್ವಾಲಿಟಿಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ನಮ್ಮಲ್ಲಿಯೂ ಆಯೋಜನೆಯನ್ನು ಮಾಡಬೇಕೆಂದು ನಿರ್ಧಾರ ಮಾಡಿದ್ದಾರೆ. ಆದರೂ ಸಹ ಅದಕ್ಕೆ ಸಾಕಷ್ಟು ನಿಗಾ ಮಾತ್ರ ಕೊಡುತ್ತಿಲ್ಲ.

ಟ್ರೈನ್ಡ್ ಹ್ಯಾಂಡ್ಸ್ ಮೊದಲು ನಮ್ಮಲ್ಲಿ ಇಲ್ಲದೆಹೋದರೆ ಈ ಬಾಬಿನಲ್ಲಿ ಯಾವತರಹ ಖರ್ಚು ಮಾಡುವುದಕ್ಕಾಗುವುದಿಲ್ಲ ಮತ್ತು ಪಂಚವಾರ್ಷಿಕ ಯೋಜನೆಯಲ್ಲಿರತಕ್ಕ ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಇವೊತ್ತು ಕ್ವಾಲಿಟಿಯನ್ನು ಮಾರ್ಕೆಟ್ಟಿನಲ್ಲಿ ನಿಗದಿ ಮಾಡಿದ್ದೇ ಆದರೆ ನಮ್ಮಲ್ಲಿ ಮಾರ್ಕೆಟ್ ವ್ಯಾಲ್ಯೂ ಬೆಳೆಯುತ್ತದೆ, ಅದಕ್ಕೆ ಬೆಲೆ ಬರುತ್ತದೆ, ಮತ್ತು ಕ್ವಾಲಿಟಿಗೆ ತಕ್ಕಬೆಲೆಬಂದರೆ ಹುದ್ದೇದಾರರಿಗೆ ಸಹಾಯ ಮಾಡಿದಂತಾಗುತ್ತದೆಂದು ನಾನು ಹೇಳಬಯಸುತ್ತೇನೆ. ಇಷ್ಟು ಹೇಳಿ, ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. P. KADAM (Karwar).—Mr. Speaker, Sir, my learned friend Sri Kabadi has rightly dealt at length with leather industry and therefore I feel I should not dilate upon it. I will in general deal with the industry, both public and private sectors. Sir, it is a matter of pride that this Government has been the pioneer in industries more so, before the reorganisation of States and Mysore State even now occupies a place of pride in the whole of India because this State on its own initiative started a number of industries in the public sector. There may be something wrong here and there with the public sector industries on account of certain weaknesses but by and large it should be the policy of the Government to see that all the weaknesses are eradicated and the public sector industries are put on a very sound basis. Mr. Speaker, the first thing that I would suggest is that there are large number of officers in the public sector who are virtually the fifth columnists of the private sector. The private sector people are very anxious to see that public sector industries are throttled. The private sector people who are out and out capitalists who know no religion except making money at any cost and evasion of tax by all sorts of means and plundering labour by vicious endeavours are endeavouring to see that public sector industries are throttled. They should not be unnerved by anybody. There may be criticism here and there of public sector industries started by the Government. They should be tactful enough and in a brief span of time they could be put on a sound basis. First, there should be selection of proper officers who are upright. Secondly, there should be proper accounting; thirdly the Government will be kind enough to look into the conditions of labour. In the State, according to the last statistics, labour employed in various industries, public and private is nearly over 2 lakhs, but housing facilities provided to the labour will be hardly to the tune of not more than 5 to 6 per cent. This is very harsh. A large section of labour is not provided with housing. They are not even given housing allowances and so many other things. When there is that insecurity, production is bound to be upset. Therefore, the Government as an ideal employer, must see that its own labour is well-kept so that production may go high and that it shall keep pace with the expectations of the Government of India and it shall counterblast and silence the private sector mischief-mongers. Sir, if we would just look to page 454 of the Draft Third Five Year Plan prepared by the Government of India, we will see that certain limits have been set out at the end of Second Five Year Plan. But unfortunately, not even in regard to a single item we have been able to reach the mark. It is a sad aspect to see that not even 50 per cent had been reached, in some cases the actual production has not even reached 33 per cent. We have to bear in mind that without industries there shall not be progress and without industrial uplift, the Nation cannot be termed as modern in the present world set up. Sir, in the private sector as well as the public sector, there is the labour problem which must be properly handled. The Government's duty is

(SRI B. P. KADAM)

plainly to see that there is no tussle between the employer and the labour. Previously in the Kerala Government, it was the policy to see that there was no breach of peace and in the event of a likelihood of breach of peace, Police used to intervene. Three or four years back when there was a strike in the Premier Automobiles in Bombay, the Management asked the Government of Bombay to extend the Police help to crush labour. But the Government made it plainly clear that the Government's responsibility was not to crush labour, but to see that there were no clashes. Whenever there are proper representations demanding bonus and fixation of grades, the management has looked to it and particular machinery is set up for that. If a strike is otherwise proper under the laws of the land, strikers cannot be crushed by the machinery of the State. Unforunately, in a large number of cases, it has trampled the very machinery and very code of conduct set up by the Government of India and it has to a large extent hit the production. Whenever the management sets up a union, it is quickly recognised and the Government also extends its help to give quick recognition. But whenever a proper representative union represent ing the entire labour comes forward and puts forth its demands, the Government promulgates various sections debarring a lawful assembly and crushes the workers. The Police go out of the way to crush labour. At the end of last year, at Dandeli, there was a lawful strike, and all the demands could have been conceded. But the Government machinery out and out crushed the labour, simply to please the management which I daresay gives a liberal treatment to all the officers and high dignitories of the State. That is how labour was crushed and that is to a large extent responsible for the upsetting of production and hitting our plan.

SRI C. J. MUCKANNAPPA.—Who is behind it ?

SRI B. P. KADAM.—The Government itself, Sir. This Government in my humble opinion should go ahead with some pharmaceutical plans. Especially when Government have gone ahead in other sectors, it would be proper to go ahead in this sphere also. There is much adultration. Recently we saw in papers that distilled water had been seized by the Government because some expert at Calcutta had directed the State Government to do so. That is a matter which should be considered. Then, Sir, this Government had given certain aids for development of fertiliser plants. In my humble opinion, these aids and the production in this sector are vitally necessary. The Government must be very vigilant enough to see that such a plant prospers from time to time. Otherwise, there is every likelihood of mischief by the private industries. Especially we know at the fag end of last year in Gujarath and Maharashtra, certain injurious material for soil was sold to agriculturist as ammonium sulphate. That not only spoiled the crop but it spoiled the soil aslo.

When we are anxious to see that agricultural production is stepped up it is the duty of every one to see that necessary conditions are created. If our agriculturists become nervous and temperamentally upset and begin to suspect that the fertilisers are likely to be adulterated, it would undermine the very confidence in the mind of the agriculturists in respect of fertilisers and that is sure to have its own impact on the agricultural production. When we want to increase agricultural production, it is very necessary to see that greater confidence is created in the mind of the agriculturist so that he may use the chemical fertilisers to a greater extent. We must see that he should not start with any nervousness. Whether it is the purchase of ammonium sulphate or any other fertiliser, he must have the confiidence that he will get the best possible stuff.

MR. DEPUTY SPEAKER.—Will you continue your speech tomorrow ?

The House will now rise and reassemble tomorrow at 1 P.M.

The House adjourned at Two Minutes past Six of the Clock to meet again at One of the Clock on Friday, the 27th July 1962.